

## ಮಾಯವಾಗುತ್ತಿದೆ ದೈವಿಕತೆ

‘ಭಕ್ತಿ ಎಂಬ ಪೃಥ್ವಿಯ ಮೇಲೆ…’ (ಫೆ. 05, ನೂತನ ದೋಶೆಟ್ಟಿ) ಸಕಾಲಿಕ ಲೇಖನ. ಈಗ ಜನಸಂಖ್ಯೆ ಹೆಚ್ಚಾಗಿದೆಯೋ ಅಥವಾ ಜನರಿಗೆ ದೇವರ ಮೇಲೆ ಭಕ್ತಿ ಹೆಚ್ಚಾಗಿದೆಯೋ ಗೊತ್ತಿಲ್ಲ. ದೂರದ ಕೇದಾರನಾಥ ಹಾಗಿರಲಿ, ಸ್ಥಳೀಯ ದೇವಸ್ಥಾನಗಳಲ್ಲೂ ಕಾಲಿಡಲು ಆಗದಂತಹ ಜನಜಂಗುಳಿ! ಹಿಂದಿನ ಕಾಲದಲ್ಲಿ ಕಾಸಿಗೆ ಕಾಸು ಕೂಡಿಟ್ಟು, ಹಿರಿಯರ ಅಪ್ಪಣೆ ಪಡೆದು, ವರ್ಷಕ್ಕೊಂದು ಬಾರಿ ದೇವರ ದರ್ಶನ ಮಾಡಿ ಬರುವುದೆಂದರೆ ಯಾಗ ಮಾಡಿದಂತಿತ್ತು. ಈಗ ಆರ್ಥಿಕವಾಗಿ ಸಬಲರಾಗಿರುವುದಷ್ಟೇ ಅಲ್ಲದೆ, ಸಾರಿಗೆ ವ್ಯವಸ್ಥೆಯಲ್ಲೂ ಅನುಕೂಲಸ್ಥರಾಗಿದ್ದಾರೆ. ಭಕ್ತಿಯನ್ನೇ ಬಂಡವಾಳ ಮಾಡಿಕೊಳ್ಳುವ ಅನೇಕ ದೇವಾಲಯಗಳಲ್ಲಿ ಭಕ್ತಿಗಿಂತ ಸಿರಿತನವೇ ಮೇಲುಗೈ ಸಾಧಿಸುತ್ತದೆ! ಜನಸಂದಣಿಯಲ್ಲಿ, ತಳ್ಳಾಟ ನೂಕಾಟಗಳಲ್ಲಿ, ದೇವರ ಸನ್ನಿಧಿಯಲ್ಲಿ ಇರಬೇಕಾದ ದೈವಿಕತೆ ಮಾಯವಾಗುತ್ತಿರುವುದು ದುರಂತ.

–ಶೋಭಾ ಸಂಪತ್, ಬೆಂಗಳೂರು

## ಆತ್ಮವಿಮರ್ಶೆಯ ಸಮಯ

ಲೇಖನ ವಾಸ್ತವಕ್ಕೆ ಹತ್ತಿರವಾಗಿದೆ. ದೇಹವೇ ದೇಗುಲವೆಂದ ಬಸವಣ್ಣನವರ ಅನುಯಾಯಿಗಳೂ ಗುಡಿ ಗೋಪುರಗಳನ್ನು ಸುತ್ತುತ್ತಿರುವುದು ವಿಪರ್ಯಾಸವೇ ಸರಿ.

ಬಹಳ ಉತ್ತಮ ಲೇಖನ. ನಾವು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

–ಜಗದೀಶ ಬಿ. ಹೊಸೂರು, ಮೈಸೂರು

–ನಿರಂಜನ್ ಬಾಬು

## ಅಪರೂಪವೇ ಸರಿ

‘ಅದ್ಭುತ ರೇಡಿಯೊ ಸಂಗ್ರಹಾಲಯ’ (ಫೆ. 05, ಧರ್ಮಾನಂದ ಶಿರ್ವ) ಕುತೂಹಲಕರ ಮಾಹಿತಿಗಳನ್ನು ಒಳಗೊಂಡಿತ್ತು. ಉದಯ ಕಲ್ಬುರ್ಗಿಯವರ ಕಾರ್ಯ ಶ್ಲಾಘನೀಯ. ಲೇಖನದಲ್ಲಿ ಉಲ್ಲೇಖಿಸಲಾದ ವಾಲ್ (wall) ರೇಡಿಯೊ ಪದದ ಸರಿಯಾದ ರೂಪ ವಾಲ್ವ್ (valve) ರೇಡಿಯೊ. ವಾಲ್ವ್ ಅಂದರೆ ಟ್ರಾನ್ಸಿಸ್ಟರ್‌ಗಳ ಪೂರ್ವಸೂರಿ ಅನ್ನಬಹುದು. ಈ ರೇಡಿಯೊಗಳು ಆನ್ ಮಾಡಿ ಒಂದೆರಡು ನಿಮಿಷಗಳ ನಂತರ ಕಾರ್ಯಾರಂಭಿಸುತ್ತಿದ್ದವು.

–ಚಿದಂಬರ ಕಾಕತ್ಕರ್, ಮಂಗಳೂರು

## ಸ್ವಾದಭರಿತ ಬರಹ

‘ಸರ್ವಂ ಅವರೆಮಯಂ’ (ಫೆ. 05, ಮಲ್ಲಿಕಾರ್ಜುನ ಹೊಸಪಾಳ್ಯ) ಮುಖಪುಟ ಬರಹ ಸ್ವಾದಭರಿತವಾಗಿತ್ತು! ಅವರೆಕಾಯಿ ಪಲ್ಯವಂತೂ ರೊಟ್ಟಿ, ಚಪಾತಿ, ದೋಸೆ, ಪೂರಿ ಜೊತೆಗೆ ತಿನ್ನಲು ಹೇಳಿ ಮಾಡಿಸಿದ ಖಾದ್ಯ. ಒಂದು ಪುಟ್ಟ ಘಟನೆ: ನನ್ನ ಚಿಕ್ಕತ್ತೆ ಬೆಂಗಳೂರಿಂದ ತಮ್ಮ ತವರೂರು ಚಿತ್ರದುರ್ಗಕ್ಕೆ ಬಂದಿದ್ದಾಗ ದುರ್ಗದ ಸೊಗಡವರೆ ಕಾಯಿಯನ್ನು ಎಂಟು ಕೇಜಿ ಕೊಂಡು ತಂದದ್ದನ್ನು ಮನೆ ಸದಸ್ಯರೆಲ್ಲ ಸೇರಿ ಸುಲಿದು ಕಾಳನ್ನು ಫ್ರಿಜ್ಜಲ್ಲಿ ಇಟ್ಟಿದ್ದಾಯಿತು. ಮರುದಿನ ಬೆಂಗಳೂರಿಗೆ ಹೊರಡುವ ಗಡಿಬಿಡಿಯಲ್ಲಿ ಫ್ರಿಜ್ಜಲ್ಲಿ ಇಟ್ಟ ಅವರೆಕಾಳನ್ನು ಮರೆತು ಬಂದ ಘಟನೆಯನ್ನು ಪ್ರತಿವರ್ಷ ಅವರೆಕಾಯಿ ಸೀಸನ್‌ನಲ್ಲೂ ನೆನಪು ಮಾಡಿಕೊಳ್ಳುತ್ತಾರೆ!

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ



## ‘ಅವರೆ’ ಸಡಗರ, ಸಂಭ್ರಮ

ಲೇಖನ ಚೇತೋಹಾರಿಯಾಗಿತ್ತು. ನಾನು ಮೈಸೂರಿನವನು. ಹಳೇ ಮೈಸೂರಿನವರಿಗೆ ಲೇಖಕರು ವರ್ಣಿಸಿರುವ ಎಲ್ಲ ಸಡಗರ ಸಂಭ್ರಮಗಳೂ ಅವರೆಕಾಯಿ ಕಾಲದಲ್ಲಿ ನಿಜವೋ ನಿಜ. ನಮ್ಮ ಮೈಸೂರು, ನಂಜನಗೂಡು, ಟಿ. ನರಸೀಪುರ, ಚಾಮರಾಜನಗರದ ಪರಿಸರದಲ್ಲಿ ಬೆಳೆಯುವ ಮಣಿ ಅವರೆಕಾಯಿಯ ಪ್ರಸ್ತಾಪ ಲೇಖನದಲ್ಲಿಲ್ಲ. ಇದು ಬೆಂಗಳೂರು, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಹಾಸನ ಮುಂತಾದ ಕಡೆ ಬೆಳೆಯುವ ಸೊಗಡು ಅವರೆಕಾಯಿಯ ತರಹ ಚಪ್ಪಟೆಯಾಗಿರದೇ ಅಗಲ, ಉದ್ದದಲ್ಲಿ ಅದಕ್ಕಿಂತ ಸ್ವಲ್ಪ ಕಡಿಮೆ ಇದ್ದು, ಉರುಟಾದ, ಗುಂಡಗಿನ ಮಣಿಯಂತಹ ಕಾಳುಗಳಿರುತ್ತವೆ. ಸೊಗಡು ಮತ್ತು ರುಚಿಯೂ ಉತ್ತಮವಾಗಿರುತ್ತದೆ.

–ಸುಬ್ರಹ್ಮಣ್ಯ ಶರ್ಮ

## ಜಿಹ್ವಾಚಾಪಲ್ಯ ಹೆಚ್ಚಿಸುವ ಅವರೆ

ಮಾಘ ಮಾಸದ ಚುಮು ಚುಮು ಚಳಿಯಲ್ಲಿ ಅವರೆಕಾಳಿನ ಬಗೆ ಬಗೆಯ ಖಾದ್ಯಗಳು ಜಿಹ್ವಾಚಾಪಲ್ಯ ಏರಿಸುವುದು ನಿಶ್ಚಯ. ಫಳಫಳ ಹೊಳೆಯುವ ತಿಳಿಹಸಿರಿನ ಎಳೆಕಾಳಿನಿಂದ ತಯಾರಾದ ಉಪ್ಪಿಟ್ಟು, ಹದವಾದ ಮೆಣಸು ಜೀರಿಗೆಯ ಒಗ್ಗರಣೆಯಿಂದ ರುಚಿ ದುಪ್ಪಟ್ಟು.

–ಮಧು, ಬೆಂಗಳೂರು

## ಆತ್ಮವಿಶ್ವಾಸದ ನಡೆ

‘ನೊಂದವರಿಗೆ ಸಾಂತ್ವನ’ (ಫೆ. 05, ರಾಘವೇಂದ್ರ ತೊಗರ್ಸಿ) ‘ರೀಲ್ ಮಾಡೆಲ್’ನಲ್ಲಿ ಕಾರ್ಪೊರೇಟ್ ಉದ್ಯೋಗಿ ರಾಕೇಶ್ ಕುರಿತು ಓದಿ ಮನ ತುಂಬಿ ಬಂದಿತು. ಶಬ್ದಗ್ರಹಣ ಕಡಿಮೆ ಇದ್ದ ಅವರು, ತಾವು ಅನುಭವಿಸಿದ ಮಾನಸಿಕ ಚಿತ್ರಹಿಂಸೆಯಿಂದ ಕಂಪನಿಗಳನ್ನು ಬದಲಿಸಿದ್ದು, ಅನೇಕ ರೀತಿಯ ಉದ್ಯೋಗಗಳನ್ನು ಕೈಗೊಂಡು ಆತ್ಮವಿಶ್ವಾಸದಿಂದ ಮುನ್ನಡೆದಿದ್ದು ಹೆಮ್ಮೆಯ ಸಂಗತಿ.

–ಆಶಾ ಅಪ್ರಮೇಯ, ದಾವಣಗೆರೆ

## ಸರಳತೆಯಿಂದ ಗೆದ್ದ ಕಥೆ

‘ಅಟ್ಟ’ (ಫೆ. 05, ಕೆ.ವಿ. ರಾಜಲಕ್ಷ್ಮಿ) ಕಥೆಯಲ್ಲಿ ನಾಯಕಿಯ ದಾಂಪತ್ಯ ಜೀವನ, ಜಂಜಾಟ, ನೀರಸ ಬದುಕು– ಮಧ್ಯಮ ವರ್ಗದ ಹಲವು ಮಹಿಳೆಯರ ಕಥೆಯೇ ಎನ್ನಿಸುವಷ್ಟು ನೈಜವಾಗಿದೆ. ಅಟ್ಟದಿಂದ ಕಸ ಹೊರತೆಗೆಯುವಂತೆ ಮನದ ಕಲ್ಮಶವನ್ನು ತೆಗೆದುಹಾಕಿ ಎನ್ನುತ್ತ ಸರಳ ಬರವಣಿಗೆಯಿಂದ ಮನ ಗೆದ್ದ ಕಥೆ.



–ಗಾಯತ್ರಿ ಎಸ್.

## ಸ್ವಾತಂತ್ರ್ಯವೇ ಪರಮ ಗುರಿ

ನಾವು ದೈಹಿಕ, ಮಾನಸಿಕವಾಗಿಯೂ ಅನಗತ್ಯ ವಸ್ತುಗಳು ಹಾಗೂ ಆಲೋಚನೆಗಳನ್ನು ಹೇಗೆ ಸಂಗ್ರಹಿಸುತ್ತೇವೆ ಎಂಬುದರ ಬಗ್ಗೆ ಗಂಭೀರ ಸಂದೇಶ ನೀಡುವ ಕಥೆ. ನಮ್ಮನ್ನು ಬಂಧಿಸುವ ಯಾವುದೇ ವಸ್ತುಗಳು, ಚಿಂತನೆಗಳನ್ನು ಹೇಗೆ ಜೀವನದಿಂದ ತೆರವುಗೊಳಿಸಬೇಕು ಎಂಬುದಕ್ಕೆ ಪ್ರಾಯೋಗಿಕ ಮಾರ್ಗದರ್ಶನದಂತಿದೆ ಕಥೆ. ಸ್ವಾತಂತ್ರ್ಯವೇ ಪರಮ ಗುರಿ ಎಂಬುದು ಒಪ್ಪಲೇಬೇಕಾದ್ದು.

–ರಾಘವೇಂದ್ರ

## ಆಪ್ತ ಬರಹ

‘ಸತ್ಯಾನ್ವೇಷಣೆಗೆ ನೂರು ವರುಷ’ (ಫೆ. 05, ಮೀನಾಕ್ಷಿ ಬಾಳಿ) ಆಪ್ತವೆನಿಸಿತು. ಗಾಂಧೀಜಿಯವರ ಆತ್ಮಕಥೆಗೆ ನೂರು ವರ್ಷ ಸಂದ ಸಂದರ್ಭದಲ್ಲಿ ಮೂಡಿಬಂದ ಲೇಖನ ಮೌಲಿಕವಾಗಿದೆ. ಗಾಂಧೀಜಿಯವರ ಆತ್ಮಕಥನದ ಕುರಿತು ಲೇಖಕರು ವಿಸ್ತೃತವಾಗಿ ವಿಶ್ಲೇಷಿಸಿದ್ದಾರೆ.

‘ಗಾಂಧೀಜಿಯವರ ಆತ್ಮಕಥೆ ಒಂದು ಕನ್ನಡಿಯಂತೆ. ಓದುಗ ತಮ್ಮನ್ನು ತಾವು ಕಂಡುಕೊಳ್ಳುವ ಸಾಧನವಾಗಿ ಪರಿಣಮಿಸಿದೆ’ ಎಂಬ ಮಾತು ಚಿಂತನಶೀಲವಾಗಿದೆ.

–ಕೆ.ಪಿ. ರಾಮಗುಂಡಿ ಬೈಲಹೊಂಗಲ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in